ಇನ್ನು ಶಿವಪ್ಪನವರು ಮಾತನಾಡಿ ಮಿಲಿಟರಿ ಹೋಟೆಲ್‌ಗಳವರಿಗೂ ಲೈಸೆನ್ಸ್ ಕೊಡಬೇಕು ಎಂದಿದ್ದಾರೆ. ಅದರ ಬಗ್ಗೆ ನಾವು ಯೋಚನೆ ಮಾಡಿದ್ದೇವೆ. ಮಿಲಿಟರಿ ಹೋಟೆಲ್‌ಗಳು ಇರುವಂಥ ಸ್ಥಳಗಳು ಪ್ರವಾಸೋದ್ಯಮದ ಅಡಿಯಲ್ಲಿ ಬರುವಂಥವುಗಳಿದ್ದರೆ ಆ ಪ್ರವಾಸೋದ್ಯಮ ಅಭಿವೃದ್ಧಿ ಮಾಡುವ ಸಲುವಾಗಿ ಸ್ಥಳಗಳನ್ನು ನಿಗಧಿ ಮಾಡಿದ್ದರೆ ಅವರಿಗೂ ಕೂಡ ನಾವು ಉತ್ತೇಜನವನ್ನು ಕೊಡುತ್ತಿದ್ದೇವೆ. ನೀವೂ ಕೂಡ ಸರ್ಕಾರದ ಒಪ್ಪಿಗೆಯನ್ನು ಪಡೆದುಕೊಂಡು ನಿಯಮಾವಳಿ ಪ್ರಕಾರ ರೆಸ್ಟೋರೆಂಟ್‌ಗಳನ್ನು ತೆರೆದು ನಡೆಸಬಹುದು ಎಂದು ಹೇಳಿದ್ದೇವೆ. ಇನ್ನು ಅನಧಿಕೃತ ಮಿಲಿಟರಿ ಹೋಟೆಲ್‌ಗಳನ್ನು ಕಡಿಮೆ ಮಾಡುವುದಕ್ಕೆ ಮತ್ತು ಸರ್ಕಾರದ ಬೊಕ್ಕಸಕ್ಕೂ ಕೂಡ ಯಾವುದೇ ತೊಂದರೆಯಾಗದಂತೆ ಮತ್ತು ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ನಮ್ಮಲ್ಲಿ ಜಾರಿ ಮತ್ತು ತನಿಖಾ ಇಲಾಖೆ ಕೂಡ ನಮ್ಮಲ್ಲಿದೆ.

ಶ್ರೀ ವಾಟಾಳ್ ನಾಗರಾಜ್:— ಪ್ರವಾಸಿ ಕೇಂದ್ರವಾದ ಮಹದೇಶ್ವರ ಬೆಟ್ಟದಲ್ಲಿ ಸಾರಾಯಿ ಅಂಗಡಿಯನ್ನು ತೆರೆಯಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಇದಕ್ಕೆ ಅಲ್ಲಿಯ ಜನಗಳ ಪ್ರತಿಭಟನೆ ಇದೆ. ಪ್ರವಾಸಿ ಕೇಂದ್ರವಿದ್ದರೂ ಕೂಡ ಶಾಲಾ ಕಾಲೇಜುಗಳ ಹತ್ತಿರ, ದೇವಸ್ಥಾನಗಳ ಹತ್ತಿರ ತೆಗೆಯಬಾರದು ಎಂದು ಇದೆ. ಆದರೂ ಕೂಡ ಯಡಿಯೂರಿನಲ್ಲಿ ದೇವಸ್ಥಾನದ ಹತ್ತಿರ ಸಾರಾಯಿ ಅಂಗಡಿ ಇದೆ. ಬಾರ್ ಕೂಡ ಇದೆ. ಇದನ್ನು ತಾವು ನೋಡಬೇಕು. ಏಕೆಂದರೆ ಅಬಕಾರಿ ಇಲಾಖೆ ಅಧಿಕಾರಿಗಳು ಇಡೀ ರಾಜ್ಯವನ್ನೇ ದಾರಿ ತಪ್ಪಿಸಿರುವಾಗ ಇನ್ನು ನಿಮ್ಮನ್ನು ದಾರಿ ತಪ್ಪಿಸದೇ ಇರುತ್ತಾರೆಯೇ?

(೫) ಬಿಜಾಪುರ ನಗರ ಸಭೆಯಿಂದ ಲೀಸ್‌ನಲ್ಲಿರತಕ್ಕಂಥ ಪ್ರಾಪರ್ಟಿಗಳಿಗೆ ಅವರು ಟ್ರಾನ್ಸ್ಫರ್ ಮಾಡುವುದಕ್ಕೆ ಮತ್ತು ಕಟ್ಟಡಗಳನ್ನು ಕಟ್ಟಲು ಪ್ರಪೋಸಲ್ ಸರ್ಕಾರಕ್ಕೆ ಬಂದಿರುವುದು.

ಶ್ರೀ ಶಿವಾನಂದ ಪಾಟೀಲ್:— ಅಧ್ಯಕ್ಷರೆ, ಕಳೆದ ಮೂರು ವರ್ಷಗಳಲ್ಲಿ ಬಿಜಾಪುರ ನಗರಸಭೆಯಿಂದ ಲೀಸ್ ನಲ್ಲಿರತಕ್ಕಂಥ ಪ್ರಾಪರ್ಟಿಗಳಿಗೆ ಅವರು ಟ್ರಾನ್ಸ್ಫರ್‌ಶನ್ ಮಾಡುವುದಕ್ಕಾಗಲಿ ಅಥವಾ ಅವರ ಕಟ್ಟಡಗಳನ್ನು ಕಟ್ಟುವ ಸಲುವಾಗಿ ಕಳೆದ ಮೂರು ವರ್ಷಗಳ ಹಿಂದೆಯೇ ಒಂದು ಪ್ರಪೋಸಲ್ ಸರ್ಕಾರಕ್ಕೆ ಬಂದಿದೆ. ಸನ್ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಅಧಿಕಾರ ವಹಿಸಿಕೊಂಡಮೇಲೆ ಅದಂಥ ಈ ವಿವಾದ ಅವರ ಅಧಿಕಾರಾವಧಿ ಮುಗಿಯುತ್ತ ಬಂದರೂ ಸದರಿ ವಿವಾದವನ್ನು ಬಗೆಹರಿಸಿಲ್ಲ. ಈ ಸಮಸ್ಯೆ ಏನಾದರೂ ಬಗೆಹರಿಸಿದರೆ ವಾರ್ಷಿಕವಾಗಿ 30 ರಿಂದ 35 ಲಕ್ಷ ರೂಪಾಯಿಗಳ ಆದಾಯ ನಗರಸಭೆಗೆ ಬರುತ್ತದೆಂದು ನಮಗನಿಸುತ್ತದೆ. ಇದು ಮಾನ್ಯ ಸಚಿವರಿಗೂ ಗೊತ್ತಿದೆ. ತಿಂಗಳಲೇ ಡಾ ತಿಮ್ಮಯ್ಯ ಕಮೀಷನ್ ವರದಿಯಂತೆ ಹಣವನ್ನು ನಗರಸಭೆಗಳಿಗೆ ಕೊಡುತ್ತಿದ್ದಾರೆ. ಮತ್ತು ಅಕ್ಟ್ರಾಯ ಗ್ರ್ಯಾಂಟ್ ಇಂಟ್ರಡ್ಯೂಸ್ ಮಾಡಬೇಕೆಂದು ಕೂಡ ಇದ್ದೀರಿ. ಯಾವ ನಗರಸಭೆ ತನ್ನದೇ ಆದಂಥ ಆದಾಯ ಹೊಂದಿದೆ, ಆದಕ್ಕೆ ಕೇವಲ ತಾವು ಒಂದು ನಿರ್ಣಯ ತೆಗೆದುಕೊಂಡರೆ 35 ರಿಂದ 40 ಲಕ್ಷ ರೂಪಾಯಿಗಳಷ್ಟು ನಗರಸಭೆಗೆ ಆದಾಯ ಬರುತ್ತದೆ. ಇದರ ಬಗ್ಗೆ ಕಳೆದ ಮೂರು ವರ್ಷದಿಂದ ಸನ್ಮಾನ್ಯ

ಪೌರಾಡಳಿತ ರಾಜ್ಯ ಸಚಿವರು ನಿರ್ಣಯ ತೆಗೆದುಕೊಳ್ಳದೆ ತಮ್ಮಲ್ಲಿಯೇ ಇಟ್ಟುಕೊಂಡು ಕುಳಿತಿದ್ದಾರೆ. ದಯವಿಟ್ಟು ಇದರ ಬಗ್ಗೆ ಯೋಗ್ಯವಾದ ನಿರ್ಣಯ ತೆಗೆದುಕೊಂಡು ನಗರಸಭೆಗೆ ಆದಾಯ ಬರುವ ಹಾಗೆ ಹಾದಿಯನ್ನು ಕಂಡುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಪೌರಾಡಳಿತ ರಾಜ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ತರಹ ಇನ್ನೊಂದು ರೇಡಿಯೋ ಶಾಪಿಂಗ್ ಕಾಂಪ್ಲೆಕ್ಸ್ ಎಂದು ಒಂದು ಇದ್ದು ಅದಕ್ಕೆ ಮೊನ್ನೆಯ ದಿವಸ ಮಾನ್ಯ ಪೌರಾಡಳಿತ ರಾಜ್ಯ ಸಚಿವರೇ ಲಿಖಿತ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಕೂಡ ಒಂದು ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಕಳೆದ ಎರಡು ವರ್ಷದಿಂದ ಅವರ ಕಚೇರಿಯಲ್ಲಿ ಫೈಲು ಬಿದ್ದಿದೆ. ಮಾನ್ಯ ಮಂತ್ರಿಗಳ ಕಚೇರಿಯಲ್ಲಿ ಒಂದೊಂದು ಸಬ್ಜೆಕ್ಟಿನ ಮೇಲೆ ನಿರ್ಣಯ ತೆಗೆದುಕೊಳ್ಳಬೇಕಾದರೆ ಎರಡೆರಡು ವರ್ಷ ಆಗುತ್ತದೆ ಇದರಿಂದ ಜನರಿಗೆ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತೀವ್ರ ಗಮನಹರಿಸಬೇಕು.

ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ಬಿಜಾಪುರ) :— ಮಾನ್ಯ ಅಧ್ಯಕ್ಷರು, ಈ ಲೀಸ್ ಸಮಸ್ಯೆ ನನ್ನ ಕ್ಷೇತ್ರದಲ್ಲಿ ಕೂಡ ಇದೆ. 30 ವರ್ಷ, 60 ವರ್ಷ ಮತ್ತು 90 ವರ್ಷ ಹೀಗೆ ಮೂರು ರೀತಿಯ ಲೀಸ್ ಇದೆ. ಆದರೆ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಆರ್ಥಿಕ ಇಲಾಖೆಯಲ್ಲಿ ಇದೆ ಎನ್ನುವ ಉತ್ತರವನ್ನು ಲಿಖಿತ ಮೂಲಕ ನನಗೆ ಕೊಟ್ಟಿದ್ದಾರೆ. ಈ ರೀತಿಯ ಪ್ರಾಪರ್ಟಿಗಳು ಸುಮಾರು ನಾಲ್ಕೈದು ಸಾವಿರ ನಗರದ ಮಧ್ಯದಲ್ಲಿ ಬರುತ್ತದೆ. ಇವತ್ತು ಅಲ್ಲಿ ಕಟ್ಟಡ ರಿಪೇರಿ ಮಾಡಲು ಅವಕಾಶ ಕೊಡುತ್ತಿಲ್ಲ, ಕಟ್ಟಡ ಕಟ್ಟಲಿಕ್ಕೆ ಅವಕಾಶ ಕೊಡುತ್ತಿಲ್ಲ. ಯಾರಾದರೂ ತಮ್ಮ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿ ತನಗೆ ಸಂಬಂಧಿಸಿದ ಕಟ್ಟಡವನ್ನು ಮಾರಾಟ ಮಾಡಿ ಸಾಲ ತೀರಿಸಿಕೊಳ್ಳಬಹುದು ಎಂದು ಅಂದುಕೊಂಡರೆ ಅದಕ್ಕೂ ಕೂಡ ಅವಕಾಶ ಇಲ್ಲ. ಆದ್ದರಿಂದ ಸರ್ಕಾರ ತೀವ್ರಗತಿಯಿಂದ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. (ಪೌರಾಡಳಿತ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಬಿಜಾಪುರ ಮುನ್ಸಿಪಾಲಿಟಿಯಲ್ಲಿ 1,051 ಲೀಸ್ ಪ್ರಾಪರ್ಟಿಗಳು ಇವೆ. 30 ವರ್ಷ, 50 ವರ್ಷ ಮತ್ತು 90 ವರ್ಷ ಇದಕ್ಕೆ ಕೊಟ್ಟಿರುವ ಅವಧಿ ಏನು ಇದೆ ಅದು 1996ಕ್ಕೆ ಮುಗಿದಿದೆ. ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸುಮಾರು 3 ವರ್ಷದಿಂದ ಸರ್ಕಾರದಲ್ಲಿಯೇ ಪೆಂಡಿಂಗ್‌ನಲ್ಲಿ ಇದೆ. ಎಂದು ಮಾನ್ಯ ಸದಸ್ಯರಾದ ಶ್ರೀ ಪಿಣಾಸಂದ ಪಾಟೀಲರು ಹೇಳಿದರು. ಬಿಜಾಪುರ ಮುನ್ಸಿಪಾಲಿಟಿಯಿಂದ ದಿನಾಂಕ 22-1-1999ರಲ್ಲಿ ಸರ್ಕಾರಕ್ಕೆ ಪ್ರಪೋಸಲ್ ಬಂದಿದೆ. ಅದನ್ನು 24-2-1999ರಂದು ಹಣಕಾಸು ಇಲಾಖೆಗೆ ಕಳುಹಿಸಲಾಗಿದೆ. ಆದರಲ್ಲಿ ಟೆಕ್ನಿಕಲ್‌ಆಗಿ ಕೆಲವು ಇನ್‌ಫಾರ್ಮೇಷನ್‌ಗಳನ್ನು ಕೇಳಿದ್ದಾರೆ. ಅದಕ್ಕೆ ಕಾರ್ಪೋರೇಷನ್ ಕಮೀಷನರ್ ಅವರನ್ನು ಕರೆಸಿ ಕೂಡಲೇ ಮೀಟಿಂಗ್ ಮಾಡಿ ಇದರ ಬಗ್ಗೆ ಡಿಸ್ಪೆಡ್ ಮಾಡಬೇಕೆಂದು ನಿರ್ಧರಿಸಿದ್ದೇವೆ. ಹಣಕಾಸು ಇಲಾಖೆಯಿಂದ ಕಳುಹಿಸಿದಂಥ

ಪ್ರಪೋಸಲ್ ಬಂದ ಕೂಡಲೆ ಅಂದರೆ 15 ದಿವಸದ ಒಳಗಾಗಿ ಮಾಡುತ್ತೇವೆ. ಹಾಗೆಯೇ ರೇಡಿಯೋ ಶಾಪಿಂಗ್ ಕಾಂಪ್ಲೆಕ್ಸ್ ಬಗ್ಗೆ ಹೇಳಿದ್ದು ಅದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರ ಜೊತೆ ಮಾತನಾಡಿದ್ದೇನೆ. ಅದನ್ನು ಕೂಡ 15 ದಿವಸದ ಒಳಗಾಗಿ ಅಪ್ರೂವ್ ಮಾಡಿಕೊಡುತ್ತೇವೆ.

(ಖ) ಜನವಾಹಿನಿ ಪತ್ರಿಕೆಯಲ್ಲಿ ಶಾಸಕರ ಭವನದ ಬಗ್ಗೆ ಬರೆದಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಕ್ಷೇತ್ರ) ಮಾನ್ಯ ಅಧ್ಯಕ್ಷರೆ, ಇವತ್ತು ಜನವಾಹಿನಿ ಪತ್ರಿಕೆಯಲ್ಲಿ ಬಂದಂಥ ಒಂದು ನ್ಯೂಸ್ ಕಾಲಂನ್ನು ತಮ್ಮಗಮನಕ್ಕೆ ತರಬಯಸುತ್ತೇನೆ. ಆ ಪತ್ರಿಕೆಯವರು ಶಾಸಕರ ಭವನದ ಬಗ್ಗೆ ಬಹಳ ಗಂಭೀರವಾಗಿ ಬರೆದಿದ್ದಾರೆ. ಅವರು ದಿವಸದಿಂದ ದಿವಸಕ್ಕೆ ನಮ್ಮ ಬಗ್ಗೆ ಹೀಗೆ ಬರೆಯುತ್ತಾ ಹೋದರೆ ಸಾರ್ವಜನಿಕರ ದೃಷ್ಟಿಯಲ್ಲಿ ನಾವು ಕೇವಲ ಮೋಜು ಮಾಡಲಿಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದೇವೆ ಎನ್ನುವ ಭಾವನೆ ಬರುವ ರೀತಿಯಲ್ಲಿ ನಮ್ಮ ಪತ್ರಿಕಾ ಗೆಳೆಯರು ಬರೆಯುತ್ತಾ ಹೋದರೆ ಬಹುಶಃ ನಮ್ಮ ಸ್ಥಿತಿ ಏನಾಗುತ್ತೋ ಗೊತ್ತಿಲ್ಲ. ಶಾಸಕರ ಭವನದಲ್ಲಿ ಅವ್ಯವಹಾರ ಕೂಡ ಆಗಿದೆ ಎಂದು ಅವರು ಹೇಳಿದ್ದಾರೆ. ನಂತರ ಇವರಿಗೆ ಹೆಲ್ತ್ ಕ್ಲಬ್ ಬೇಕೇ? ಬೆಳಿಗ್ಗೆ ವಾಕ್ ಹೋದರೆ ಬೊಜ್ಜು ಕರಗಿಸಬಹುದು. ಎನ್ನುವ ಮಟ್ಟಕ್ಕೆ ಬರೆಯುವುದು ಇದು ಸಭೆಗೆ ಘನತೆ ತರುತ್ತದೆಯೇ ಇಲ್ಲವೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಶಾಸಕರ ಭವನ ತಮ್ಮ ಆಡಳಿತ ವ್ಯಾಪ್ತಿಗೆ ಬರುವುದರಿಂದ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಲಿಲ್ಲ. ತಾವು ಏನಾದರೂ ಅವಕಾಶ ಕೊಟ್ಟರೆ ಇದನ್ನು ಬೇರೆ ರೀತಿಯಲ್ಲಿ ಕೇಳಬೇಕೆಂದು ಇದ್ದೆ. ಇದಕ್ಕೆ ನಿಮ್ಮ ಮಾರ್ಗದರ್ಶನ ಬೇಕು. ಇಂಥದಕ್ಕೆ ಎಲ್ಲಾದರೂ ಒಂದು ಕಡೆ ನಾವು ಉತ್ತರ ಹೇಳಬೇಕಾಗುತ್ತದೆ. ನಾವೆಲ್ಲ ವಿಲನ್ ತರಹ ಕಾಣುವ ಹಾಗೆ ಬರೆದರೆ ಹೇಗೆ? ನಾವು ಮನೆ ಕೆಲಸವನ್ನು ಬಿಟ್ಟು, ನಮಗೆ ಬರಬೇಕಾದ ಆದಾಯಗಳನ್ನು ಬಿಟ್ಟು, ಒಬ್ಬಿಬ್ಬರು ಶ್ರೀಮಂತರು ಇರಬಹುದು, ಈ ರೀತಿ ಬರೆದರೆ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. 'ಫೈವ್ ಸ್ಟಾರ್ ಹೋಟೆಲಿಗೆ ಕಡಿಮೆ ಇಲ್ಲದಂತೆ ಶಾಸಕರ ಭವನವನ್ನು ಕೊಡಲಾಗಿದೆ, ಇಡೀ ಏರಿಯಾವನ್ನು ಪ್ಯೂರಿಫೈ ಮಾಡುವಂಥ ಪ್ಯೂರಿಫೈಯರ್ಸ್ ಹಾಕಿದ್ದೀರಿ, ಶಾಸಕರ ಭವನಕ್ಕೆ ಕಬ್ಬನ್ ಪಾರ್ಕಿನಿಂದ ನೇರವಾಗಿ ಆಕ್ಸಿಜನ್ ಬರುತ್ತದೆ. ಒಂದು ಸ್ಟೀಲ್ ಅಲ್ಯೂಮಿನಿಯಂ ಬೀಡಿಂಗ್ ಹಾಕಿ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮೋಜು ಮಾಡುತ್ತಾರೆ' ಇಂಥವುಗಳನ್ನು ಬರೆದುಕೊಂಡು ಹೋದರೆ ನಮ್ಮ ಸ್ಥಿತಿ ಏನು? ತಾವು ನಮ್ಮ ರಕ್ಷಣೆಗೆ ಬರಬೇಕು. ಬಹುಶಃ ಇದಕ್ಕೆ ಸರ್ಕಾರದಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲವೆಂದು ನನ್ನ ಭಾವನೆ. ಇದರ ಬಗ್ಗೆ ಯಾವುದಾದರೂ ಒಂದು ದಿವಸ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು :— ನಾನೂ ಸಹ ಈ ಪತ್ರಿಕೆಯಲ್ಲಿ ಬಂದ ವರದಿಯನ್ನು ಓದಿದೆ. ನಮ್ಮ ಆಫೀಸಿನಿಂದ ಅದಕ್ಕೆ ರಿಪ್ಲೈ ಕಳುಹಿಸುತ್ತೇವೆ. ತಪ್ಪು ತಿಳುವಳಿಕೆಯಿಂದ ಬರೆದಿದ್ದರೆ